# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1955/2022
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 18/11/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: 1) ಶ್ರೀ.ಮಲ್ಲಿಕಾರ್ಜುನಯ್ಯ ತಂದೆ ಮೈಲಾರಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ, ಚಿಕ್ಕಬಳ್ಳಾಪುರ 2) ಪಿ.ವಾಸು ಬಿನ್ ಪವನರಾಜ್ ಎಸ್. ಸಹಾಯಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ, ಚಿಕ್ಕಬಳ್ಳಾಪುರ ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

ಚಿಕ್ಕಬಳ್ಳಾಪುರ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ, ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ 1) ಶ್ರೀ.ಮಲ್ಲಿಕಾರ್ಜುನಯ್ಯ ತಂದೆ ಮೈಲಾರಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ, ಚಿಕ್ಕಬಳ್ಳಾಪುರ. 2) ಪಿ.ವಾಸು ಬಿನ್ ಪವನರಾಜ್ ಎಸ್. ಸಹಾಯಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ, ಚಿಕ್ಕಬಳ್ಳಾಪುರ (ಇನ್ನು ಮುಂದೆ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಎಂ.ಶ್ರೀನಿವಾಸ ತಂದೆ ಲೇಟ್ ಮಂಜುನಾಥ, 1ನೇ ದರ್ಜೆ ವಿದ್ಯುತ್ ಗುತ್ತಿಗೆದಾರರು, ನಂ.123/212, ನಾರಾಯಣಪ್ಪ ಬಿಲ್ಡಿಂಗ್, 1ನೇ ಬ್ಲಾಕ್, ದೊಡ್ಡಬೊಮ್ಮಸಂದ್ರ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು 1 ಮತ್ತು 2ನೇ ಎದುರುದಾರರನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, 1 ಮತ್ತು 2 ಎದುರುದಾರರು ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ

ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ</u>:- ದೂರುದಾರರು 2018 ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಯೋಜನೆಯಡಿಯಲ್ಲಿ ಟೆಂಡರ್ ಮೂಲಕ ಒಟ್ಟು 11 ಬೋರವೆಲ್‌ಗಳನ್ನು ಕೊರೆದಿದ್ದು, ಅವುಗಳಿಗೆ ಪಂಪು, ಮೊಟರ್, ವಾಯರ್ ಮತ್ತು ಸ್ಟಾರವರ್ ಒದಗಿಸಲು ಒಟ್ಟು ಟೆಂಡರ್ ಮೊತ್ತ ರೂ. 45 ಲಕ್ಷಗಳಾಗಿದ್ದು, ಸದರಿ ಮೊತ್ತವನ್ನು ಸಣ್ಣ ನೀರಾವರಿ ಇಲಾಖೆಯಿಂದ ದೂರುದಾರರು ಪಡೆದುಕೊಂಡಿರುತ್ತಾರೆ. ಈ ಸಮಯದಲ್ಲಿ ಅವರು ಎ.ಇ.ಇ ಆದ ಎದುರುದಾರರಿಗೆ ಯಾವುದೇ ಲಂಚದ ಹಣವನ್ನು ಕೊಟ್ಟಿರುವುದಿಲ್ಲ.

3. ನಂತರ 2018-19 ನೇ ಸಾಲಿನಲ್ಲಿ ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಯೋಜನೆ ಅಡಿಯಲ್ಲಿನ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಒಟ್ಟು 27 ಕೊಳವೆಬಾವಿ ಕೊರೆದಿರುವ ಕಾಮಗಾರಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಒಟ್ಟು ರೂ.53,10,591/-ಗಳ ಕಾಮಗಾರಿಯ ಗುತ್ತಿಗೆಯನ್ನು ಚಿಕ್ಕಬಳ್ಳಾಪುರ ಸಣ್ಣ ನೀರಾವರಿ ಇಲಾಖೆಯ ಟೆಂಡರ್ ಪ್ರಕಟಣೆ 07/2019-20 ದಿ: 17-06-2019 ರಂದು ಪಡೆದುಕೊಂಡಿರುತ್ತಾರೆ. ದಿ: 30-07-2019 ರಂದು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ, ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಟೆಂಡರ್ ಕಾರ್ಯಾದೇಶವನ್ನು ಪಡೆದುಕೊಂಡು ನಿಗದಿತ ಅವಧಿಯಲ್ಲಿ 20 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿರುತ್ತಾರೆ. ಉಳಿದ 7 ಕೊಳವೆ ಬಾವಿಗಳಿಗೆ ರೈತರ ಜಮೀನುಗಳಲ್ಲಿ ಬೆಳೆಗಳನ್ನು ಇಟ್ಟಿದ್ದ ಕಾರಣಗಳಿಂದಾಗಿ ಸಂಪರ್ಕವನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. ಈ ವಿಷಯ ಇಲಾಖೆಯ ಗಮನಕ್ಕೆ ಬಂದಿರುತ್ತದೆ.

4. ಮೇಲ್ಕಂಡ ವಿದ್ಯುತ್ ಕಾಮಗಾರಿಯ 1ನೇ ಹಂತದ ಕಾಮಗಾರಿಯ ರೂ. 16 ಲಕ್ಷದ ಬಿಲ್ಲನ್ನು ಸೆಪ್ಟೆಂಬರ್ 2019 ರ ಮಾಹೆಯಲ್ಲಿ ದೂರುದಾರರ ಬ್ಯಾಂಕ್ ಖಾತೆಗೆ ಜಮಾ ಆಗಿರುತ್ತದೆ. ದಿ: 15-09-2019 ರಂದು 2ನೇ ಎದುರುದಾರರು 2ನೇ ಹಂತದ ಕಾಮಗಾರಿಯ ರೂ.15,94,261/-ಗಳ ಬಿಲ್ಲನ್ನು ಸಿದ್ದುಪಡಿಸಿರುತ್ತಾರೆ. ಆದರೆ, ಚಿಕ್ಕಬಳ್ಳಾಪುರ ಉಪವಿಭಾಗದ ಎ.ಇ.ಇ ಆದ 1ನೇ ಎದುರುದಾರರು ಬಿಲ್ಲನ್ನು ಶಿಫಾರಸ್ಸು ಮಾಡಿ ಕಾರ್ಯಪಾಲಕ ಇಂಜಿನಿಯರ್‌ವರ ಕಛೇರಿಗೆ ಕಳುಹಿಸದೆ ತಮ್ಮ ಬಳಿಯೇ ಇಟ್ಟುಕೊಂಡಿರುತ್ತಾರೆ.

5. ಅಕ್ಟೋಬರ್ ಮಾಹೆಯಲ್ಲಿ ದೂರುದಾರರು ತಮ್ಮ ಮೊಬೈಲ್ ನಂ. 9845677965 ರಿಂದ 2ನೇ ಎದುರುದಾರರ ಮೊಬೈಲ್ ನಂ. 9036174321 ಗೆ ಕರೆ ಮಾಡಿ 2ನೇ ಹಂತದ ಬಿಲ್ ಬಾಕಿ ಇರುವ ಬಗ್ಗೆ

ಕೇಳಿದಾಗ 2ನೇ ಎದುರುದಾರರು ತನಗೆ ರೂ. 25,000/- ಲಂಚದ ಹಣ ನೀಡಿದರೆ ಕೆಲಸ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ. ಆ ಸಮಯದಲ್ಲಿ ದೂರುದಾರರು ತನ್ನ ಮತ್ತು 2ನೇ ಎದುರುದಾರರ ನಡುವೆ ನಡೆದ ಸಂಭಾಷಣೆಯನ್ನು ದೂರುದಾರರು ಈ ಮೊದಲು ಬಳಸುತ್ತಿದ್ದ ಓಪೋ ಮೊಬೈಲ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಂತರ ದಿ: 2-11-2019 ರಿಂದ ಸ್ಯಾಮಸಂಗ್ ಮೊಬೈಲ್‌ನ್ನು ಬಳಸುತ್ತಿದ್ದು, ಮೊಬೈಲ್ ಬದಲಿಸಿದ್ದರಿಂದ ಹಳೆಯ ಮೊಬೈಲ್‌ನಿಂದ ವಾಟ್ಸ್‌ಪ್ ಮೂಲಕ ಹೊಸ ಮೊಬೈಲ್‌ಗೆ ಸದರಿ ರೆಕಾರ್ಡ್ ಫೈಲ್‌ನ್ನು ವರ್ಗಾಯಿಸಿ ಹೊಸ ಮೊಬೈಲ್‌ನಲ್ಲಿ ಇಟ್ಟುಕೊಂಡಿರುತ್ತಾರೆ.

6. ನಂತರ ಈ ಬಗ್ಗೆ ದೂರುದಾರರು ದಿ: 23-01-2020 ರಂದು ಮಧ್ಯಾಹ್ನ ಸುಮಾರು 2.20 ಘಂಟೆ ಸಮಯದಲ್ಲಿ ಸಣ್ಣ ನೀರಾವರಿ ಉಪವಿಭಾಗದ ಕಛೇರಿಯಲ್ಲಿ 1ನೇ ಎದುರುದಾರರನ್ನು ಭೇಟಿ ಮಾಡಿ ಬಿಲ್ಲಿಗೆ ಸಹಿ ಮಾಡುವಂತೆ ಕೇಳಿದಾಗ 1ನೇ ಎದುರುದಾರರು ದೂರುದಾರರಿಗೆ ಲಂಚದ ಹಣವನ್ನು ನೀಡಿದರೆ ಮಾತ್ರ ಸಹಿ ಮಾಡುತ್ತೇನೆಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ದೂರುದಾರರು ತನ್ನ ಮತ್ತು 1ನೇ ಎದುರುದಾರರ ನಡುವೆ ನಡೆದ ಸಂಭಾಷಣೆಯನ್ನು ತಮ್ಮ ಸ್ಯಾಮಸಂಗ್ ಮೊಬೈಲ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಂತರ ಸಂಜೆ ಸುಮಾರು 4.50 ಘಂಟೆಗೆ ಕಾರ್ಯ ನಿರ್ವಾಹಕ ಇಂಜಿನಿಯರವರ ಕಛೇರಿಗೆ ಹೋಗಿ ಅಲ್ಲಿಯೂ ಸಹ 1 ಮತ್ತು 2ನೇ ಎದುರುದಾರರನ್ನು ಭೇಟಿ ಮಾಡಿ ಬಿಲ್ಲನ್ನು ಶಿಫಾರಸ್ಸು ಮಾಡಿ ಕಳುಹಿಸಿಕೊಡಲು ಕೇಳಿದಾಗ 1ನೇ ಎದುರುದಾರರು ತನಗೆ ಈ ಮೊದಲು 11 ಬೋರವೆಲ್‌ಗಳನ್ನು ಕೊರೆಸಿರುವುದಕ್ಕೆ ಸುಮಾರು ರೂ.45 ಲಕ್ಷಗಳ ಬಿಲ್ ಮತ್ತು ವಿದ್ಯುತ್ ಕಾಮಗಾರಿಯ 1ನೇ ಹಂತದ ರೂ. 17,90,234/- ಗಳ ಬಿಲ್‌ಗಳಿಗೆ ಲಂಚದ ಹಣ ನೀಡಿರುವುದಿಲ್ಲ. ಈ ಎರಡು ಬಿಲ್‌ಗಳಿಗೆ ಶೇಕಡ 2% ರಂತೆ ಲಂಚದ ಹಣ ನೀಡಿದರೆ ಮಾತ್ರ 2ನೇ ಹಂತದ ಬಿಲ್‌ಗೆ ಸಹಿ ಮಾಡುವುದಾಗಿ ತಿಳಿಸಿರುತ್ತಾರೆ. ಆಗ ಕಛೇರಿಯಲ್ಲಿಯೇ ಇದ್ದ 2ನೇ ಎದುರುದಾರರು ಪಂಪ್ ಮೋಟರ್‌ಗೆಂದು, 1ನೇ ಎದುರುದಾರರಿಗೆ 3% ಮತ್ತು ತನಗೆ 5% ಕೊಟ್ಟೋಗಿ ಎಂದು ಲಂಚದ ಹಣಕ್ಕೆ ಒತ್ತಾಯಿಸಿದ ಕಾರಣ ದೂರುದಾರರು ಆ ಸಮಯದಲ್ಲಿ ತನ್ನ ಹಾಗೂ 1 ಮತ್ತು 2ನೇ ಎದುರುದಾರರ ನಡುವೆ ನಡೆದ ಸಂಭಾಷಣೆಯನ್ನು ತಮ್ಮ ಸ್ಯಾಮಸಂಗ್ ಮೊಬೈಲ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

7. 1ನೇ ಎದುರುದಾರರು ಒಟ್ಟು 62 ಲಕ್ಷಗಳ ಬಿಲ್ಲ್‌ಗೆ 2% ರಂತೆ ರೂ.1,25,000/- ಹಾಗೂ 2ನೇ ಎದುರುದಾರರು ರೂ. 25,000/- ಗಳ ಲಂಚದ ಹಣಕ್ಕಾಗಿ ಒತ್ತಾಯಿಸಿ ಲಂಚದ ಹಣವನ್ನು ನೀಡಿದರೆ ಮಾತ್ರ ಬಿಲ್ಲನ್ನು ಶಿಫಾರಸ್ಸು ಮಾಡುವುದಾಗಿ ಹೇಳಿ ಲಂಚದ ಹಣಕ್ಕಾಗಿ ಒತ್ತಾಯಿಸಿರುತ್ತಾರೆ.

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1955/2022

8. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 28/01/2020 ರಂದು ಸಂಜೆ ಸುಮಾರು 4.00 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಚಿಕ್ಕಬಳ್ಳಾಪುರ ಜಿಲ್ಲೆ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 2/2020 ಪಿ.ಸಿ. ಕಾಯಿದೆ ಕಲಂ 7 (ಎ) ರಡಿ ಎದುರುದಾರರುಗಳ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

9. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ವಿ.ಶಾಂತಮೂರ್ತಿ ಬಿನ್ ಲೇಟ್.ವೆಂಕಟಸ್ವಾಮಿ ಮತ್ತು ಶ್ರೀ ಜೆ.ಎನ್.ಮಂಜುನಾಥರಾವ್ ಬಿನ್ ಜೆ.ಹೆಚ್. ನಾಗರಾಜ್‌ರಾವ್ ಇವರನ್ನು ಬರಮಾಡಿಕೊಂಡು ಅವರುಗಳ ಪರಿಚಯ ಮಾಡಿಸಿ, ದೂರುದಾರರಿಗೂ ಸಹ ಪರಿಚಯ ಮಾಡಿಸಿ ದೂರುದಾರರು ನೀಡಿದ್ದ ದೂರಿನ ಪ್ರತಿಯನ್ನು ಪಂಚರಿಗೆ ನೀಡಿ ಓದಿಕೊಳ್ಳುವಂತೆ ತಿಳಿಸಿರುತ್ತಾರೆ. ಪಂಚರು ಅದನ್ನು ಓದಿ ನೋಡಿದಾಗ ಅದರಲ್ಲಿ ಎದುರುದಾರರು ಲಂಚದ ಹಣಕ್ಕಾಗಿ ಒತ್ತಾಯಿಸಿರುವುದು ಕಂಡುಬಂದಿರುತ್ತದೆ.

10. ದೂರುದಾರರು ಅಕ್ಟೋಬರ್ ಮಾಹೆಯಲ್ಲಿ 2ನೇ ಹಂತದ ಬಿಲ್ ಬಾಕಿ ಇರುವ ಬಗ್ಗೆ ತಮ್ಮ ಮೊಬೈಲ್‌ನಿಂದ 2ನೇ ಎದುರುದಾರರ ಮೊಬೈಲ್‌ಗೆ ಕರೆ ಮಾಡಿ ಕೇಳಿದಾಗ 2ನೇ ಎದುರುದಾರರು ತನಗೆ ರೂ.25,000/- ಗಳ ಲಂಚದ ಹಣ ನೀಡಿದರೆ ಕೆಲಸ ಮಾಡಿಕೊಡುವುದಾಗಿ ತಿಳಿಸಿದ್ದರಿಂದ ದೂರುದಾರರು ತಮ್ಮ ಮತ್ತು 2ನೇ ಎದುರುದಾರರ ನಡುವೆ ನಡೆದ ಸಂಭಾಷಣೆಯನ್ನು ಈ ಮೊದಲು ಬಳಸುತ್ತಿದ್ದ ಒಪೋ ಮೊಬೈಲ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡಿರುವುದಾಗಿ ನಂತರ ದಿ: 02-01-2019 ರಿಂದ ಸ್ಯಾಮಸಂಗ್ ಮೊಬೈಲ್‌ನ್ನು ಬಳಸುತ್ತಿದ್ದುದರಿಂದ ಹಳೆಯ ಮೊಬೈಲ್‌ನಿಂದ ವಾಟ್ಸಪ ಮೂಲಕ ಸದರಿ ವಾಯ್ಸ್ ರೆಕಾರ್ಡ್ ಫೈಲ್‌ನ್ನು ವರ್ಗಾಯಿಸಿ ಹೊಸ ಮೊಬೈಲ್‌ನಲ್ಲಿ ಇಟ್ಟುಕೊಂಡಿರುವುದಾಗಿ ಪಂಚರ ಮುಂದೆ ತಿಳಿಸಿರುತ್ತಾರೆ.

11. ದೂರುದಾರರು ದಿ: 23-01-2020 ರಂದು ಮಧ್ಯಾಹ್ನ ಸುಮಾರು 2.20 ಗಂಟೆ ಸಮಯದಲ್ಲಿ 1ನೇ ಎದುರುದಾರರನ್ನು ಅವರ ಕಛೇರಿಯಲ್ಲಿ ಭೇಟಿ ಮಾಡಿ ಬಿಲ್ಲಗಳಿಗೆ ಶಿಫಾರಸ್ಸು ಮಾಡುವಂತೆ ಕೇಳಿದಾಗ 1ನೇ ಎದುರುದಾರರು ದೂರುದಾರರಿಗೆ ಲಂಚದ ಹಣ ಕೊಟ್ಟರೆ ಮಾತ್ರ ಬಿಲ್ಲಗಳಿಗೆ ಸಹಿ ಮಾಡುವುದಾಗಿ ತಿಳಿಸಿ ಲಂಚದ ಹಣಕ್ಕಾಗಿ ಒತ್ತಾಯಿಸಿದ್ದರಿಂದ ದೂರುದಾರರು ತಮ್ಮ ಬಳಿ ಇದ್ದ ಸ್ಯಾಮಸಂಗ್ ಮೊಬೈಲ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡು ಸಂಜೆ ಸುಮಾರು 4.55 ಘಂಟೆಗೆ ಕಾರ್ಯ ನಿರ್ವಾಹಕ ಇಂಜಿನಿಯರವರ ಕಛೇರಿಗೆ ಹೋಗಿದ್ದು, ಅಲ್ಲಿಯೂ ಸಹ 1 ಮತ್ತು 2ನೇ ಎದುರುದಾರರನ್ನು ಭೇಟಿ ಮಾಡಿ ಬಿಲ್ಲ್‌ನ್ನು ಶಿಫಾರಸ್ಸು ಮಾಡಿ ಕಳುಹಿಸಿಕೊಡಲು ಕೇಳಿದಾಗ 1ನೇ ಎದುರುದಾರರು ತನಗೆ ಈ ಮೊದಲಿನ 11 ಬೋರವೆಲ್‌ಗಳನ್ನು ಕೊರೆಸಿರುವುದಕ್ಕೆ ಸುಮಾರು 45 ಲಕ್ಷಗಳ ಬಿಲ್ ಮತ್ತು ವಿದ್ಯುತ್ ಕಾಮಗಾರಿಯ 1ನೇ ಹಂತದ

ರೂ.17,90,234/- ಗಳ ಬಿಲ್‌ಗಳಿಗೆ ಲಂಚದ ಹಣ ನೀಡಿರುವುದಿಲ್ಲ. ಈ ಎರಡು ಬಿಲ್‌ಗಳಿಗೆ ಶೇಕಡ 2% ರಂತೆ ಲಂಚದ ಹಣ ನೀಡಿದರೆ ಮಾತ್ರ ಈಗಿರುವ 2ನೇ ಹಂತದ ಬಿಲ್ಲಿಗೆ ಸಹಿ ಮಾಡುವುದಾಗಿ ತಿಳಿಸಿದ್ದು, ಅವರ ಜೊತೆಗೆ 2ನೇ ಎದುರುದಾರರು ಪಂಪು ಮೋಟರ್‌ಗೆ ಎಂದು 1ನೇ ಎದುರುದಾರರಿಗೆ ಶೇಕಡ 3% ತನಗೆ 5% ಕೊಟ್ಟೋಗಿ ಎಂದು ಲಂಚದ ಹಣಕ್ಕೆ ಒತ್ತಾಯಿಸಿದ್ದರಿಂದ ದೂರುದಾರರು ತನ್ನ ಹಾಗೂ 1 ಮತ್ತು 2ನೇ ಎದುರುದಾರರ ನಡುವೆ ನಡೆದ ಸಂಭಾಷಣೆಯನ್ನು ತಮ್ಮ ಸ್ಯಾಮಸಂಗ್ ಮೊಬೈಲ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ.

12. ತನಿಖಾಧಿಕಾರಿಯವರು ದೂರುದಾರರಿಗೆ ಈ ಮೊದಲು ಬಳಸುತ್ತಿದ್ದ ಒಪೋ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡಿರುವ ಮೂಲ ವಾಯ್ಸ್ ರೆಕಾರ್ಡ್ ಬಗ್ಗೆ ಕೇಳಿದಾಗ ಮೂಲ ವಾಯ್ಸ್ ರೆಕಾರ್ಡ್‌ನ್ನು ಡಿಲಿಟ್ ಮಾಡಿರುವುದಾಗಿ ತಿಳಿಸಿರುತ್ತಾರೆ.

13. ತನಿಖಾಧಿಕಾರಿಯವರು ದೂರುದಾರರಿಂದ ಸ್ಯಾಮಸಂಗ್ ಮೊಬೈಲ್‌ನ್ನು ಪಡೆದುಕೊಂಡು ಅದರಲ್ಲಿದ್ದ 3 ಆಡಿಯೋ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ 3 ಫೈಲ್‌ಗಳಿಗೆ ಯಾವುದೇ ಲೋಪ ಬಾರದಂತೆ ಕಂಪ್ಯೂಟರ್ ಮೂಲಕ 2 ಖಾಲಿ ಸಿಡಿಗಳಿಗೆ ವರ್ಗಾಯಿಸಿಕೊಂಡು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

14. ತನಿಖಾಧಿಕಾರಿಯವರು ದೂರುದಾರರಿಗೆ 1ನೇ ಎದುರುದಾರರಿಗೆ ಶೇಕಡ 2% ರಂತೆ ಈಗ ಎಷ್ಟು ಮೊತ್ತದ ಲಂಚದ ಹಣವನ್ನು ಕೊಡಬೇಕಾಗಿದೆ ಎಂದು ಕೇಳಿದಾಗ ದೂರುದಾರರು 1ನೇ ಎದುರುದಾರರಿಗೆ ರೂ.1,25,000/- ಗಳು ಕೊಡಬೇಕಾಗಿದೆ. ಆದರೆ, ಈಗ ತಾನು ಮುಂಗಡವಾಗಿ ರೂ.50,000/- ಗಳನ್ನು ಹಾಜರಪಡಿಸುತ್ತೇನೆ ಎಂದು ಹೇಳಿ ಹಾಜರಪಡಿಸಿದಾಗ ಪಂಚರು ತನಿಖಾಧಿಕಾರಿಯವರ ಸೂಚನೆಯಂತೆ ಅವುಗಳನ್ನು ಪರಿಶೀಲಿಸಿದಾಗ ಅದರಲ್ಲಿ ರೂ.2,000/- ಮುಖಬೆಲೆಯ 25 ನೋಟುಗಳಿದ್ದು, ಒಟ್ಟು ರೂ.50,000/- ಗಳು ಇರುತ್ತದೆ ಎಂಬುದಾಗಿ ಖಾತ್ರಿ ಪಡಿಸಿರುತ್ತಾರೆ.

15. ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿ ಸಹಾಯದಿಂದ ಮತ್ತು ಪಂಚರು ತಿಳಿಸಿದಂತೆ ಸದರಿ ಹಣದ ನಂಬರ್ ಮತ್ತು ಮೌಲ್ಯವನ್ನು ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡಿಸಿ ಹಾಳೆಯಲ್ಲಿ ಪ್ರಿಂಟನ್ನು ತೆಗೆಸಿಕೊಂಡಿರುತ್ತಾರೆ. ರೂ.50,000/- ಗಳ ನೋಟುಗಳ ಎರಡು ಬದಿಗೆ ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರ ಮೂಲಕ ಫಿನಾಪ್ತಲಿನ್ ಪುಡಿಯನ್ನು ತೆಳುವಾಗಿ ಸವರಿರುತ್ತಾರೆ.

16. ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ನೆರಳು ಸಾಕ್ಷಿದಾರರಿಗೆ ಮತ್ತು ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡಿಸಿ ಪ್ರಿಂಟ್ ತೆಗೆದಿದ್ದ ನೋಟುಗಳ ವಿವರಗಳುಳ್ಳ ಹಾಳೆಯನ್ನು ಪಂಚರ ಕೈಗೆ ಕೊಟ್ಟು ತನಿಖಾಧಿಕಾರಿಯವರು ಪಂಚರುಗಳಿಗೆ ತಾಳೆಯಾಗುತ್ತಿರುವ ಬಗ್ಗೆ ಖಚಿತಪಡಿಸಿ ಎಂದು ತಿಳಿಸಿದ್ದರ ಮೇರೆಗೆ ನೆರಳು ಸಾಕ್ಷಿಯಾದ ಪಂಚ–1 ರವರು ನೋಟುಗಳನ್ನು ಕೈಯಲ್ಲಿ ಪಡೆದುಕೊಂಡು ನೋಟುಗಳ ನಂಬರು ಮತ್ತು ಮೌಲ್ಯ ಹೇಳಿದ್ದು, ಪಂಚ–2 ರವರು ಆ ನೋಟುಗಳ ನಂಬರ್ ಮತ್ತು ಮೌಲ್ಯವನ್ನು ತಾಳೆ ಮಾಡಿ ತಾಳೆಯಾಗುತ್ತಿರುವ ಬಗ್ಗೆ ಖಚಿತಪಡಿಸಿರುತ್ತಾರೆ.

17. ನಂತರ ತನಿಖಾಧಿಕಾರಿಯವರು ದೂರುದಾರರಿಗೆ 2ನೇ ಎದುರುದಾರರಿಗೆ ತಂದಿರುವ ಲಂಚದ ಹಣವನ್ನು ಹಾಜರಪಡಿಸುವಂತೆ ತಿಳಿಸಿದಾಗ ಅವರು ರೂ.25,000/– ಹಣವನ್ನು ಹಾಜರಪಡಿಸಿದಾಗ ತನಿಖಾಧಿಕಾರಿಯವರ ಸೂಚನೆಯಂತೆ ಪಂಚರು ಅವುಗಳನ್ನು ಪರಿಶೀಲಿಸಿದಾಗ ಅದರಲ್ಲಿ ರೂ.2,000/– ಮುಖಬೆಲೆಯ 12 ನೋಟುಗಳು ಮತ್ತು ರೂ.500/– ಮುಖಬೆಲೆಯ 2 ನೋಟುಗಳು ಒಟ್ಟು ರೂ.25,000/– ಗಳಿರುವ ಬಗ್ಗೆ ತಿಳಿಸಿರುತ್ತಾರೆ.

18. ನೆರಳುಸಾಕ್ಷಿದಾರರಾದ ಪಂಚ–1 ರವರು ತಮ್ಮ ಎರಡು ಕೈಬೆರಳುಗಳನ್ನು ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಯುವಂತೆ ತನಿಖಾಧಿಕಾರಿಯವರು ಹೇಳಿದಂತೆ ಅವರು ತಮ್ಮ ಎರಡು ಕೈಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಾಗ ಬಣ್ಣರಹಿತವಾದ ಸೋಡಿಯಂ ಕಾರ್ಬೋನೇಟ್ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ.

19. ಈ ಪ್ರಕ್ರಿಯೆ ಕೈಗೊಳ್ಳುವ ವೇಳೆ ರಾತ್ರಿ 7.30 ಗಂಟೆಯಾಗಿದ್ದು, ತಡರಾತ್ರಿ ಯಾಗಿರುವುದ್ದರಿಂದ ಎದುರುದಾರರು ಸಿಗುವ ಸಂಭವ ಇಲ್ಲದಿರುವುದ್ದರಿಂದ ತನಿಖೆಯನ್ನು ದಿ: 29–01–2020 ರಂದು ಕೈಗೊಳ್ಳುವುದು ಸೂಕ್ತವೆಂದು ಪಂಚರು, ದೂರುದಾರರು ಮತ್ತು ತನಿಖಾಧಿಕಾರಿಯವರು ನಿರ್ಧರಿಸಿದ ನಂತರ ತನಿಖಾದಿಕಾರಿಯವರು ಸದರಿ ವಿಚಾರವನ್ನು ಗೌಪ್ಯವಾಗಿಡಲು ಎಲ್ಲರಿಗೂ ತಿಳಿಸಿ ಪಂಚರಿಗೆ ಮತ್ತು ದೂರುದಾರರಿಗೆ ದಿ: 29–01–2020 ರಂದು ಬೆಳ್ಳಿಗೆ 9.00 ಗಂಟೆಗೆ ಚಿಕ್ಕಬಳ್ಳಾಪುರ ಭ್ರಷ್ಟಾಚಾರ ನಿಗ್ರಹ ದಳ ಠಾಣೆಯಲ್ಲಿ ಹಾಜರಾಗುವಂತೆ ತಿಳಿಸಿ ಫಿನಾಪ್ತಲಿನ್ ಪುಡಿ ಸವರಿದ ನೋಟುಗಳ ಅಂದರೆ ರೂ.50,000/– ಮತ್ತು ರೂ. 25,000/– ಗಳು ನೆರಳು ಸಾಕ್ಷಿಯಾದ ಪಂಚ–1 ರವರು 2 ಪ್ರತ್ಯೇಕ ಖಾಲಿ ಎನವಲೆಪ್ ಕವರಗಳಲ್ಲಿ ಇಟ್ಟಿದ್ದು, ನಂತರ ತನಿಖಾಧಿಕಾರಿಗಳು ಸದರಿ ಎನವಲೆಪ್ ಕವರಗಳಿಗೆ ಮೊಹರ್ ಮಾಡಿಸಿ ಠಾಣೆಯ ತಮ್ಮ ಕೊಠಡಿಯಲ್ಲಿರುವ ಕಬ್ಬಿಣದ ಅಲ್ಮೆರಾದಲ್ಲಿ ಇರಿಸಿ ಬೀಗ ಹಾಕಿ ಭದ್ರ ಪಡಿಸಿರುತ್ತಾರೆ.

20. ತನಿಖಾಧಿಕಾರಿಯವರು ಪ್ರಾಯೋಗಿಕ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ತಮ್ಮ ಸಿಬ್ಬಂದಿಯವರ ಮೂಲಕ ಪ್ರಮುಖ ಘಟನೆಗಳ ವಿಡಿಯೋ ಚಿತ್ರಿಕರಣ ಮಾಡಿಸಿ ಪೋಟೋಗಳನ್ನು ತೆಗೆಸಿರುತ್ತಾರೆ. ಪ್ರಾಯೋಗಿಕ ಪಂಚನಾಮೆಯನ್ನು ದಿ:28-01-2020 ರಂದು ಸಂಜೆ: 5.20 ಗಂಟೆಯಿಂದ ರಾತ್ರಿ 7.30 ಗಂಟೆಯವರೆಗೆ ಚಿಕ್ಕಬಳ್ಳಾಪುರ ಭ್ರಷ್ಟಾಚಾರ ನಿಗ್ರಹ ದಳ ಠಾಣೆಯಲ್ಲಿ ಪಂಚನಾಮೆಯನ್ನು ಗಣಕೀಕರಣ ಮಾಡಿಸಿರುತ್ತಾರೆ.

21. ದಿ: 29-01-2020 ರಂದು ತನಿಖಾಧಿಕಾರಿಯವರ ಸೂಚನೆಯಂತೆ ಬೆಳಿಗ್ಗೆ 9.00 ಗಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಠಾಣೆಗೆ ಪಂಚರು ದೂರುದಾರರು ಮತ್ತು ಸಿಬ್ಬಂದಿಯವರು ಹಾಜರಾದಾಗ ತನಿಖಾಧಿಕಾರಿಯವರು ತನಿಖೆಯನ್ನು ಮುಂದುವರೆಸಿದ್ದು, ತನಿಖಾಧಿಕಾರಿಯವರ ಸೂಚನೆಯಂತೆ ನೆರಳು ಸಾಕ್ಷಿದಾರರು ದಿ: 28-01-2020 ರಂದು ತನಿಖಾಧಿಕಾರಿಯವರ ರೂಮಿನ ಅಲೆಮೆರಾದಲ್ಲಿ 2 ಎನವಲೆಪ್ ಕವರಗಳಿಗೆ ಹಾಕಿ ಭದ್ರಪಡಿಸಿ ಇಟ್ಟಿದ್ದ ರೂ. 50,000/- ಗಳನ್ನು ಮತ್ತು ರೂ.25,000/- ಗಳಿರುವ ಎನವಲೆಪ್ ಕವರ್‌ಗಳನ್ನು ದೂರುದಾರರ ಸಮಕ್ಷಮ ಅಲೆಮೆರಾದಿಂದ ಹೊರತೆಗೆದಿದ್ದು, ತನಿಖಾಧಿಕಾರಿಯವರ ಸೂಚನೆಯಂತೆ ಅವರ ಸಿಬ್ಬಂದಿಯವರು ರೂ.50,000/- ಗಳಿರುವ ನೋಟುಗಳಿಗೆ ತೆಳುವಾಗಿ ಫಿನಾಪ್ತಲೀನ್ ಪುಡಿಯನ್ನು ಸವರಿಸಿದಾಗ ನೆರಳು ಸಾಕ್ಷಿದಾರರು ದೂರುದಾರರ ಅಂಗಶೋಧನೆ ಮಾಡಿ ಎದುರುದಾರರಿಗೆ ಹಾನಿಯುಂಟು ಮಾಡುವ ಯಾವುದೇ ವಸ್ತುಗಳು ಕಾಗದ ಪತ್ರವಾಗಲಿ ಹಣವಾಗಲಿ ಇಲ್ಲದಿರುವ ಬಗ್ಗೆ ಖಚಿತಪಡಿಸಿಕೊಂಡು ರೂ.50,000/- ಗಳನ್ನು ದೂರುದಾರರು ಪ್ಯಾಂಟಿನ ಬಲಭಾಗದ ಜೇಬಿನಲ್ಲಿಟ್ಟು, ರೂ.25,000/- ಗಳಿರುವ ನೋಟುಗಳಿಗೆ ತೆಳುವಾಗಿ ಪಿನಾಪ್ತಲೀನ್ ಪುಡಿಯನ್ನು ಸವರಿದ ನಂತರ ಸದರಿ ನೋಟುಗಳನ್ನು ದೂರುದಾರರ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇರಿಸಿರುತ್ತಾರೆ.

22. ದೂರುದಾರರು 1ನೇ ಎದುರುದಾರರಾದ ಮಲ್ಲಿಕಾರ್ಜುನ್ ಮತ್ತು 2ನೇ ಎದುರುದಾರರಾದ ವಾಸುರವರ ಬಳಿಗೆ ಹೋದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆಯಿಟ್ಟಾಗ 1ನೇ ಎದುರುದಾರರಾದ ಮಲ್ಲಿಕಾರ್ಜುನರವರಿಗೆ ಫಿನಾಪ್ತಲೀನ್ ಪುಡಿಯನ್ನು ಸವರಿರುವ ರೂ.50,000/- ಗಳನ್ನು 2ನೇ ಎದುರುದಾರರಾದ ವಾಸುರವರಿಗೆ ಫಿನಾಪ್ತಲೀನ್ ಪುಡಿಯನ್ನು ಸವರಿರುವ ರೂ.25,000/- ಗಳ ನೋಟುಗಳನ್ನೇ ಕೊಡಬೇಕೆಂದು ಮತ್ತು ಎದುರುದಾರರು ಹಣವನ್ನು ಸ್ವೀಕರಿಸಿದ ನಂತರ ಎದುರುದಾರರಿಗೆ ಗೊತ್ತಾಗದಂತೆ ತಮ್ಮ ಬಲಗೈನಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ಟ್ರ್ಯಾಪ ತಂಡಕ್ಕೆ ಸಿಗ್ನಲ್‌ನ್ನು ನೀಡುವಂತೆ ತನಿಖಾಧಿಕಾರಿಯವರು ದೂರುದಾರರಿಗೆ ಸೂಚನೆಯನ್ನು ಕೊಟ್ಟಿರುತ್ತಾರೆ.

23. ನೆರಳು ಸಾಕ್ಷಿಯಾದ ಶ್ರೀ ವಿ.ಶಾಂತಮೂರ್ತಿರವರಿಗೆ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ಸಂದರ್ಭಕ್ಕೆ ಅನುಸಾರವಾಗಿ ದೂರುದಾರರು ಮತ್ತು ಎದುರುದಾರರ ಮಧ್ಯೆ ನಡೆಯುವ ವಿದ್ಯಮಾನಗಳನ್ನು ಗಮನಿಸುವುದಲ್ಲದೇ, ಅವರ ಮಧ್ಯೆ ನಡೆಯುವ ಸಂಭಾಷಣೆಗಳನ್ನು ಕೇಳಿಸಿಕೊಂಡು ಎದುರುದಾರರು ದೂರುದಾರರಿಂದ ಹಣ ಪಡೆದ ನಂತರ ದೂರುದಾರರಿಗೆ ಸಿಗ್ನಲ್ ಕೊಡಲು ಸಾಧ್ಯವಾಗದಿದ್ದಲ್ಲಿ ಬಲಗೈನಿಂದ ತಲೆಸವರಿಕೊಳ್ಳುವುದರ ಮೂಲಕ ಸಿಗ್ನಲ್ ಕೊಡಲು ತಿಳಿಸಿರುತ್ತಾರೆ.

24. ನಂತರ ತನಿಖಾಧಿಕಾರಿಯವರು ಎದುರುದಾರರು ಎಲ್ಲಿಗೆ ಹಣವನ್ನು ತೆಗೆದುಕೊಂಡು ಬರುವಂತೆ ಹೇಳಿದ್ದಾರೆಂದು ಕೇಳಿದಾಗ ದೂರುದಾರರು ಎದುರುದಾರರಿಗೆ ಫೋನ್ ಮಾಡಿದರೆ ಅವರೇ ತಿಳಿಸುತ್ತಾರೆಂದು ಹೇಳಿದಾಗ ತನಿಖಾಧಿಕಾರಿಯವರು 1ನೇ ಎದುರುದಾರರಾದ ಮಲ್ಲಿಕಾರ್ಜುನರವರಿಗೆ ಕರೆ ಮಾಡುವಂತೆ ದೂರುದಾರರಿಗೆ ತಿಳಿಸಿದಾಗ ದೂರುದಾರರು ತಮ್ಮ ಮೊಬೈಲ್‌ನಿಂದ 1ನೇ ಎದುರುದಾರರ ಮೊಬೈಲ್‌ಗೆ ಕರೆಮಾಡಿದಾಗ 1ನೇ ಎದುರುದಾರರು ತಾನು ಈಗ ಬಾಗೇಪಲ್ಲಿಗೆ ಹೋಗುತ್ತಿದ್ದು, ಸಂಜೆ ಚಿಕ್ಕಬಳ್ಳಾಪುರಕ್ಕೆ ವಾಪಸ್ಸು ಬಂದ ನಂತರ ಭೇಟಿ ಮಾಡಲು ತಿಳಿಸಿರುತ್ತಾರೆ. ಆಗ ಸಮಯ ಬೆಳಿಗ್ಗೆ ಸುಮಾರು 10.45 ಗಂಟೆ ಆಗಿರುತ್ತದೆ. ನಂತರ ತನಿಖಾಧಿಕಾರಿಯವರು 2ನೇ ಎದುರುದಾರರಾದ ವಾಸುರವರಿಗೆ ಕರೆ ಮಾಡುವಂತೆ ತಿಳಿಸಿದಾಗ ದೂರುದಾರರು 2ನೇ ಎದುರುದಾರರ ಮೊಬೈಲ್‌ಗೆ ಕರೆ ಮಾಡಿದಾಗ ಎದುರುದಾರರು ದೂರುದಾರರ ಕರೆಯನ್ನು ಸ್ವೀಕರಿಸುತ್ತಿಲ್ಲವೆಂದು ತಿಳಿಸಿರುತ್ತಾರೆ.

25. ತನಿಖಾಧಿಕಾರಿಯವರು ತಮ್ಮ ಠಾಣೆಯಲ್ಲಿದ್ದ ಸೋನಿ ವಾಯ್ಸ್‌ರೆಕಾರ್ಡ್‌ನ್ನು ತೆಗೆದುಕೊಂಡು ಅದನ್ನು ಪರಿಶೀಲಿಸಿ, ಸುಸ್ಥಿತಿಯಲ್ಲಿರುವ ಸೋನಿ ವಾಯ್ಸ್ ರೆಕಾರ್ಡ್‌ನ್ನು ದೂರುದಾರರಿಗೆ ನೀಡಿ, ಎದುರುದಾರರಿಗೆ ಹಣ ಕೊಡಲು ಹೋದಾಗ ದೂರುದಾರರು ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಿಸಿಕೊಳ್ಳುವಂತೆ ತಿಳುವಳಿಕೆ ಕೊಟ್ಟು ವಿವರಿಸಿ ತೋರಿಸಿರುತ್ತಾರೆ.

26. ಈ ಮುಂದುವರೆದ ಪ್ರಾಯೋಗಿಕ ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ತನಿಖಾಧಿಕಾರಿಯವರ ಸಿಬ್ಬಂದಿಯವರು ಠಾಣೆಯ ಸೋನಿ ಕ್ಯಾಮೆರಾದಲ್ಲಿ ಪ್ರಮುಖ ಘಟನೆಗಳ ಫೋಟೋಗಳನ್ನು ತೆಗೆದಿರುತ್ತಾರೆ. ಪಂಚನಾಮೆಯನ್ನು ಬೆಳಿಗ್ಗೆ 9.15 ರಿಂದ ಬೆಳಿಗ್ಗೆ 11.00 ಗಂಟೆಯವರೆಗೆ ಭ್ರಷ್ಟಾಚಾರ ನಿಗ್ರಹ ದಳ ಠಾಣೆಯಲ್ಲಿ ಗಣಕೀಕರಣ ಮಾಡಿಸಿರುತ್ತಾರೆ.

27. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದಿ: 29-01-2020 ರಂದು ಚಿಕ್ಕಬಳ್ಳಾಪುರ ಭ್ರಷ್ಟಾಚಾರ ನಿಗ್ರಹ ದಳದ ಠಾಣೆಯಲ್ಲಿ ಬೆಳಿಗ್ಗೆ 11.00 ಗಂಟೆಗೆ

ಮುಂದುವರೆದ ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ 1ನೇ ಎದುರುದಾರರು ದೂರುದಾರರಿಗೆ ಸಂಜೆ ಭೇಟಿ ಮಾಡಲು ತಿಳಿಸಿದ್ದರಿಂದ ಮತ್ತು 2ನೇ ಎದುರುದಾರರು ಕರೆಯನ್ನು ಸ್ವೀಕರಿಸದಿದ್ದರಿಂದ ತನಿಖಾಧಿಕಾರಿಯವರು ಪಂಚರುಗಳಿಗೆ, ದೂರುದಾರರಿಗೆ ಹಾಗೂ ಸಿಬ್ಬಂದಿಯವರಿಗೆ ಎದುರುದಾರರಿಗಾಗಿ, ಠಾಣೆಯಲ್ಲಿಯೇ ಸಂಜೆಯವರೆಗೂ ಕಾಯೋಣ ಎಂದು ತಿಳಿಸಿರುತ್ತಾರೆ.

28. ಸಂಜೆ ಸುಮಾರು 5.05 ಗಂಟೆ ಸಮಯದಲ್ಲಿ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರಿಗೆ ಕರೆ ಮಾಡಲು ತಿಳಿಸಿದಾಗ ದೂರುದಾರರು 1ನೇ ಎದುರುದಾರರಿಗೆ ಕರೆ ಮಾಡಿದಾಗ ಎದುರುದಾರರು ದೂರುದಾರರಿಗೆ ತಾನು ಕಛೇರಿಗೆ ಬರುತ್ತಿದ್ದು, ಕಛೇರಿಗೆ ಬರಲು ತಿಳಿಸಿರುತ್ತಾರೆಂದು ದೂರುದಾರರು ತನಿಖಾಧಿಕಾರಿಯವರಿಗೆ ತಿಳಿಸಿದಾಗ ತನಿಖಾಧಿಕಾರಿಯವರು 2ನೇ ಎದುರುದಾರರಿಗೆ ಕರೆ ಮಾಡಲು ತಿಳಿಸಿದಾಗ ದೂರುದಾರರು 2ನೇ ಎದುರುದಾರರ ಮೊಬೈಲ್‌ಗೆ ಕರೆ ಮಾಡಿದಾಗ 2ನೇ ಎದುರುದಾರರು ದೂರುದಾರರ ಕರೆಯನ್ನು ಸ್ವೀಕರಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

29. ತನಿಖಾಧಿಕಾರಿಯವರು ಎದುರುದಾರರನ್ನು ಟ್ರ್ಯಾಪ ಮಾಡುವ ಸಲುವಾಗಿ, ಪಂಚರನ್ನು, ದೂರುದಾರರನ್ನು, ಸಿಬ್ಬಂದಿಯವರನ್ನು ಟ್ರ್ಯಾಪ ಕಿಟ್‌ನೊಂದಿಗೆ ಸರ್ಕಾರಿ ವಾಹನದಲ್ಲಿ ಹಾಗೂ ಸಿಬ್ಬಂದಿಯವರನ್ನು ಸ್ವಿಫ್ಟ್ ಡಿಸೈರ್ ವಾಹನದಲ್ಲಿ ಸಂಜೆ 5.15 ಗಂಟೆಗೆ ಎಸಿಬಿ ಠಾಣೆಯನ್ನು ಬಿಟ್ಟು ಸಂಜೆ ಸುಮಾರು 5.20 ಗಂಟೆಗೆ ಚಿಕ್ಕಬಳ್ಳಾಪುರ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದ ಆವರಣದಲ್ಲಿ ವಾಹನಗಳನ್ನು ನಿಲ್ಲಿಸಿ ತನಿಖಾಧಿಕಾರಿಯವರು ದೂರುದಾರರನ್ನು, ನೆರಳು ಸಾಕ್ಷಿದಾರರನ್ನು ವಾಹನದಿಂದ ಕೆಳಗೆ ಇಳಿಸಿ ಮುಂದುವರೆದ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನೀಡಿದ ಸೂಚನೆ ಹಾಗೂ ತಿಳುವಳಿಕೆಗಳನ್ನು ಮತ್ತೊಮ್ಮೆ ತಿಳಿಸಿ ಎದುರುದಾರರನ್ನು ಭೇಟಿ ಮಾಡುವ ಸಲುವಾಗಿ ಸಂಜೆ 5.30 ಗಂಟೆಗೆ ಜಿಲ್ಲಾ ನ್ಯಾಯಾಲಯದ ಸಂಕೀರ್ಣದ ಆವರಣದಿಂದ ದೂರುದಾರರು, ನೆರಳು ಸಾಕ್ಷಿ ಮತ್ತು ಸಿಬ್ಬಂದಿರವರುಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಉಪವಿಭಾಗ, ಚಿಕ್ಕಬಳ್ಳಾಪುರವರ ಕಛೇರಿಯ ಬಳಿಗೆ ಕಳುಹಿಸಿಕೊಟ್ಟಿರುತ್ತಾರೆ. ಅವರನ್ನು ಅನುಸರಿಸಿಕೊಂಡು ಪಂಚಸಾಕ್ಷಿ, ತನಿಖಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಯವರುಗಳು ಅನುಮಾನ ಬಾರದಂತೆ ಗುಪ್ತವಾಗಿ ದೂರುದಾರರು ಅಥವಾ ನೆರಳು ಸಾಕ್ಷಿದಾರರು ಕೊಡುವ ಸಿಗ್ನಲ್‌ಗಾಗಿ ಎದುರುದಾರರ ಕಛೇರಿಯ ಬಳಿ ಮರೆಯಾಗಿ ಗುಪ್ತವಾಗಿ ಕಾಯುತ್ತಿದ್ದು, ಸಂಜೆ ಸುಮಾರು 5.40 ಗಂಟೆ ಸಮಯದಲ್ಲಿ ದೂರುದಾರರು ಕಛೇರಿಯಿಂದ ಹೊರಗಡೆ ಬಂದು ಮುಂದುವರೆದ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಅವರಿಗೆ ನೀಡಿದ ಸೂಚನೆಯಂತೆ ತಮ್ಮ ತಲೆಯನ್ನು ಬಲಗೈನಿಂದ ಸವರಿಕೊಳ್ಳುವುದರ ಮೂಲಕ ಸನ್ನೆಯನ್ನು ಮಾಡಿರುತ್ತಾರೆ.

30. ಸನ್ನೆಯ ಮೇರೆಗೆ ಗುಪ್ತವಾಗಿ ಕಾಯುತ್ತಿದ್ದ ತನಿಖಾಧಿಕಾರಿಯವರು ಹಾಗೂ ಸಿಬ್ಬಂದಿಯವರು ಮತ್ತು ನೆರಳು ಸಾಕ್ಷಿದಾರರು ದೂರುದಾರರ ಬಳಿಗೆ ಹೋದಾಗ ದೂರುದಾರರು ಅವರನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕೊಠಡಿಗೆ ಕರೆದುಕೊಂಡು ಹೋಗಿ ಕೊಠಡಿಯ ಚೇರಿನಲ್ಲಿ ಕುಳಿತಿದ್ದ 1ನೇ ಎದುರುದಾರರನ್ನು ತೋರಿಸಿ ಇವರೇ ತನ್ನಿಂದ ಮುಂಗಡ ಲಂಚದ ಹಣ ರೂ. 50,000/- ಗಳನ್ನು ಕೇಳಿ ತಮ್ಮ ಬಲಗೈನಿಂದ ಸ್ವೀಕರಿಸಿ ಲೆಕ್ಕ ಹಾಕದೇ ಎಡಗೈ ಮೂಲಕ ತಮ್ಮ ಪ್ಯಾಂಟಿನ ಹಿಂಭಾಗದ ಎಡ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆಂದು ತಿಳಿಸಿದಾಗ ತನಿಖಾಧಿಕಾರಿಯವರು 1ನೇ ಎದುರುದಾರರಿಗೆ ತಮ್ಮ ಇಲಾಖಾ ಗುರುತಿನ ಚೀಟಿಯನ್ನು ತೋರಿಸಿ ತಮ್ಮನ್ನು ಪರಿಚಯಿಸಿಕೊಂಡು ತಾವು ಬಂದ ಉದ್ದೇಶವನ್ನು ತಿಳಿಸಿ, ಪಂಚರನ್ನು ಮತ್ತು ಟ್ರ್ಯಾಪ ತಂಡವನ್ನು ಪರಿಚಯಿಸಿ ತಾವು ನಡೆಸುವ ತನಿಖೆಯಲ್ಲಿ ಸಹಕರಿಸುವಂತೆ ತಿಳಿಸಿರುತ್ತಾರೆ.

31. ತನಿಖಾಧಿಕಾರಿಯವರ ಸೂಚನೆಯಂತೆ ಎದುರುದಾರರು ಒಂದು ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಬಲಗೈ ಬೆರಳುಗಳನ್ನು ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಅದೇ ರೀತಿ ಇನ್ನೊಂದು ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಎದುರುದಾರರು ತನಿಖಾಧಿಕಾರಿಯವರ ಸೂಚನೆಯಂತೆ ತಮ್ಮ ಎಡಗೈ ಬೆರಳುಗಳನ್ನು ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಯವರ ಸದರಿ ದ್ರಾವಣಗಳನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

32. ತನಿಖಾಧಿಕಾರಿಯವರ ಸೂಚನೆಯಂತೆ ನೆರಳು ಸಾಕ್ಷಿದಾರರ ಶಾಂತ ಮೂರ್ತಿರವರು ಎದುರುದಾರರು ಧರಿಸಿದ್ದ ಸಿಮೆಂಟ್ ಕಲರ್ ಪ್ಯಾಂಟಿನ ಹಿಂಭಾಗದ ಎಡಜೇಬಿನಲ್ಲಿದ್ದ ಲಂಚದ ಹಣವನ್ನು ತೆಗೆದು ಪರಿಶೀಲಿಸಿದಾಗ ಅವು ಬೆರಳಚ್ಚು ಮಾಡಿಸಿ ಇಟ್ಟುಕೊಂಡ ಹಾಳೆಗೆ ತಾಳೆಯಾಗುತ್ತವೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಸದರಿ ಹಣವನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ.

33. ತನಿಖಾಧಿಕಾರಿಯವರು ದೂರುದಾರರಿಗೆ 2ನೇ ಎದುರುದಾರರಿಗೆ ಕರೆ ಮಾಡುವಂತೆ ತಿಳಿಸಿದಾಗ ದೂರುದಾರರು 2ನೇ ಎದುರುದಾರರಿಗೆ ಕರೆ ಮಾಡಿದಾಗ ಮೊಬೈಲ್ ಸ್ವಿಚ್ ಆಫ್ ಆಗಿದೆ ಎಂದು ದೂರುದಾರರು ತನಿಖಾಧಿಕಾರಿಗೆ ತಿಳಿಸಿರುತ್ತಾರೆ.

34. ತನಿಖಾಧಿಕಾರಿಯವರ ಸೂಚನೆಯಂತೆ ದೂರುದಾರರು ಒಂದು ಬಟ್ಟಲ್ಲಿನಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತಮ್ಮ ಎರಡು ಕೈಬೆರಳುಗಳನ್ನು ಅದ್ದಿ ತೊಳೆದಾಗ ಬಣ್ಣ ರಹಿತವಾದ ದ್ರಾವಣವು ತಿಳಿ ಗುಲಾಬಿ

ಬಣ್ಣಕ್ಕೆ ಬದಲಾವಣೆಯಾಗಿದ್ದನ್ನು ತನಿಖಾಧಿಕಾರಿಯವರು ಮುಂದಿನ ತನಿಖೆಗಾಗಿ ದ್ರಾವಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

35. ತನಿಖಾಧಿಕಾರಿಯವರು ದೂರುದಾರರಿಗೆ 2ನೇ ಎದುರುದಾರರಾದ ವಾಸುರವರಿಗೆ ನೀಡಲು ನೀಡಿರುವ ರೂ.25,000/-ಗಳನ್ನು ತೆಗೆದು ಹಾಜರುಪಡಿಸಲು ಸೂಚಿಸಿದಾಗ ದೂರುದಾರರು ತಮ್ಮ ಪ್ಯಾಂಟಿನ ಎಡಭಾಗದ ಜೇಬಿನಲ್ಲಿದ್ದ ರೂ.25,000/- ಗಳನ್ನು ತೆಗೆದು ಹಾಜರಪಡಿಸಿದ ಹಣದ ನಂಬರ್ ಮತ್ತು ಮೌಲ್ಯವನ್ನು ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡಿಸಿ ಪ್ರಿಂಟ್ ತೆಗೆದಿದ್ದ ಹಾಳೆಗೆ ತಾಳೆ ಮಾಡಿ ತಾಳೆಯಾಗುತ್ತಿರುವ ಬಗ್ಗೆ ನೆರಳು ಸಾಕ್ಷಿದಾರರು ತನಿಖಾಧಿಕಾರಿಗೆ ತಿಳಿಸಿದಾಗ ತನಿಖಾಧಿಕಾರಿಯವರು ಸದರಿ ಹಣವನ್ನು ಮುಂದಿನ ತನಿಖೆಗಾಗಿ ತಮ್ಮ ವಶದಲ್ಲಿಟ್ಟುಕೊಂಡಿರುತ್ತಾರೆ.

36. ತನಿಖಾಧಿಕಾರಿಯವರ ಸೂಚನೆಯಂತೆ 1ನೇ ಎದುರುದಾರರು ಧರಿಸಿದ್ದ ಸಿಮೆಂಟ್ ಕಲರಿನ್ ಪ್ಯಾಂಟನ್ನು ಬಿಚ್ಚಿಸಿ, ಬದಲಿ ಪ್ಯಾಂಟಿನ ವ್ಯವಸ್ಥೆಯನ್ನು ಕಲ್ಪಿಸಿ, ಲಂಚದ ಹಣವನ್ನು ಇಟ್ಟಿದ್ದ ಪ್ಯಾಂಟಿನ ಹಿಂಭಾಗದ ಎಡಜೇಬನ್ನು ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಬಣ್ಣರಹಿತವಾದ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಯವರು ಪ್ಯಾಂಟನ್ನು ಮತ್ತು ದ್ರಾವಣವನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

37. ತನಿಖಾಧಿಕಾರಿಯವರು ಪಂಚರ ಸಮಕ್ಷಮ ತಮ್ಮ ಸಿಬ್ಬಂದಿಯಾದ ಶ್ರೀ ಮಂಜುನಾಥ ಸಿಪಿಸಿ ರವರ ಮುಖಾಂತರ 1ನೇ ಎದುರುದಾರರನ್ನು ಶೋಧಿಸಿದಾಗ ಎದುರುದಾರರ ಬಳಿ 1 ಮೊಬೈಲ್ ಪತ್ತೆಯಾಗಿದ್ದು, ಅದನ್ನು ಪಡೆದುಕೊಂಡು ಪರಿಶೀಲಿಸಿದಾಗ ಅದರ ಮೊಬೈಲ್ ನಂಬರ್ 9980121260(ಏರಟೆಲ್) ಮತ್ತು ಐಎಂಇಐ ನಂಬರ್ 864835032790879/864835032790861 ಅನ್ನು ಪಡೆದುಕೊಂಡು ಎದುರುದಾರರಿಗೆ ಮೊಬೈಲ್ ಫೋನ್‌ನ್ನು ಹಿಂತಿರುಗಿಸಿರುತ್ತಾರೆ.

38. ತನಿಖಾಧಿಕಾರಿಯವರು ದೂರುದಾರರಿಂದ ಸೋನಿ ವಾಯ್ಸ್ ರೆಕಾರ್ಡ್‌ನ್ನು ಪಡೆದುಕೊಂಡು, ಅದನ್ನು ಕಂಪ್ಯೂಟರ್‌ಗೆ ಹಾಕಿ ಅದರಲ್ಲಿ ರೆಕಾರ್ಡ್ ಆಗಿದ್ದ ಧ್ವನಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ ಎರಡು ಖಾಲಿ ಸಿಡಿಗಳಿಗೆ ವರ್ಗಾಯಿಸಿಕೊಂಡು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

39. ದಿ:01-09-2014 ರಂದು 2ನೇ ಎದುರುದಾರರು ಸಣ್ಣ ನೀರಾವರಿ ಮತ್ತು ಅಂರ್ತಜಲ ಅಭಿವೃದ್ಧಿ ಇಲಾಖೆ ಉಪವಿಭಾಗ ಚಿಕ್ಕಬಳ್ಳಾಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಂದು ಕಾರ್ಯಪಾಲಕ ಅಭಿಯಂತರಾದ

ಶ್ರೀ ಆರ್.ನರೇಂದ್ರ ಬಾಬುರವರು ತಿಳಿಸಿರುತ್ತಾರೆ. 1 ಮತ್ತು 2ನೇ ಎದುರುದಾರರು ದೂರುದಾರರಿಗೆ ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟಿರುವ ಸಂಧರ್ಬದಲ್ಲಿ ನಡೆಸಿರುವ ಸಂಭಾಷಣೆಗಳಲ್ಲಿ 1 ಮತ್ತು 2ನೇ ಎದುರುದಾರರುಗಳ ಸಂಭಾಷಣೆಯ ಧ್ವನಿಯನ್ನು ಕಂಪ್ಯೂಟರ್ ಮೂಲಕ ಕೇಳಿಸಿದಾಗ ಶ್ರೀ ಆರ್.ನರೇಂದ್ರಬಾಬುರವರು ಸಂಭಾಷಣೆಯನ್ನು ಗಮನವಿಟ್ಟು ಆಲಿಸಿದ ನಂತರ ಅವರು 1 ಮತ್ತು 2ನೇ ಎದುರುದಾರರ ಸಂಭಾಷಣೆಗಳು ಅವರವರ ಧ್ವನಿಗಳಿಗೆ ಹೋಲಿಕೆಯಾಗುತ್ತವೆಂದು ತಿಳಿಸಿರುತ್ತಾರೆ.

40. ತನಿಖಾಧಿಕಾರಿಯವರು 1ನೇ ಎದುರುದಾರರಿಗೆ ಸಮಜಾಯಿಷಿ ಏನಾದರೂ ಇದ್ದರೆ ಬರೆದುಕೊಡಿ ಎಂದು ಹೇಳಿದಾಗ ಅವರು ತಮ್ಮ ಸಮಜಾಯಿಷಿಯನ್ನು ಬರೆದುಕೊಟ್ಟಿದ್ದು, ಅದರಲ್ಲಿ "ಪೋಲಿಸ್ ಇನ್ಸ್‌ಪೆಕ್ಟರ್ ಭ್ರಷ್ಟಾಚಾರ ನಿಗ್ರಹ ದಳ, ಚಿಕ್ಕಬಳ್ಳಾಪುರ ಜಿಲ್ಲೆ ಮಾನ್ಯರೇ, ವಿಷಯ ಶ್ರೀ ಶ್ರೀನಿವಾಸ್ ಇಲೆಕ್ಟ್ರಿಕಲ್ ಗುತ್ತಿಗೆದಾರರು ಲಂಚ ಪಡೆದಿರುವ ಆರೋಪದ ಬಗ್ಗೆ ನನ್ನ ಪ್ರತಿ ರಕ್ಷಣಾ ಹೇಳಿಕೆ:- ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾನು ದಿ: 29-01-2020 ರಂದು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ಬಾಗೇಪಲ್ಲಿ ತಾಲ್ಲೂಕಿನ ಗ್ರಾಮಗಳಾದ ನೀರಘಂಟಪಲ್ಲಿ ಪಾತಪಾಳ್ಯ ಕೋಳವಾರಪಲ್ಲಿ, ಕೊತ್ತೂರು ಗ್ರಾಮಗಳಲ್ಲಿ ನಡೆಯುತ್ತಿರುವ ಚೆಕ್ ಡ್ಯಾಮಗಳನ್ನು ಶಾಖಾಧಿಕಾರಿಯಾದ ಸುನೀಲ್ ಜೆ.ಇ. ರವರ ಜೊತೆಯಲ್ಲಿ ಕಾಮಗಾರಿಗಳು (ಮೇಲೆ ಹೇಳಿದ) ಸ್ಥಳಗಳನ್ನು ಪರಿಶೀಲನೆ ಮಾಡಿ ಬರುವಾಗ ಶ್ರೀನಿವಾಸ ರವರು ನನ್ನ ದೂರುವಾಣಿಗೆ ಕರೆ ಮಾಡಿದರು ಎಲ್ಲಿದ್ದೀರಿ ಎಂದು ಕೇಳಿದರು ನಾನು ಕಛೇರಿಯಲ್ಲಿರುವುದಾಗಿ ಹೇಳಿದೆ ಗುತ್ತಿಗೆದಾರರು ನಾನು ನಂದಿ ಹತ್ತಿರ ಇರುವುದಾಗಿ ತಿಳಿಸಿದರು. ನಂತರ ಗುತ್ತಿಗೆದಾರರು ಸುಮಾರು 4.30 ಕ್ಕೆ ನನ್ನ ಕಛೇರಿಗೆ ಬಂದರು ಬಂದ ತಕ್ಷಣ ವಾಸು ಎ.ಇ ಎಲ್ಲಿದ್ದಾರೆಂದು ಕೇಳಿದರು ನಾನು ಬಂದಾಗ ವಾಸು ಎ.ಇ ವಿಭಾಗ ಕಛೇರಿಯಲ್ಲಿರುವುದಾಗಿ ತಿಳಿಸಿದರು. ಆದ್ದರಿಂದ, ನಾನು ಗುತ್ತಿಗೆದಾರರಿಗೆ ವಿಭಾಗ ಕಛೇರಿಯಲ್ಲಿ ಇದ್ದಾರೆ ಎಂದು ಹೇಳಿದೆ ಆದರೆ ನನ್ನ ಹತ್ತಿರ ಬಿಲ್ಲುಗಳನ್ನು ಕೇಳಿದರು, ಆದರೆ ನನ್ನ ಹತ್ತಿರ ಯಾವುದೇ ತರಹದ ಬಿಲ್ಲುಗಳು ಇಲ್ಲದಿರುವುದಾಗಿ ತಿಳಿಸಿದೆ ಈ ಮಾತನ್ನು ಹೇಳುತ್ತಿದ್ದಂತೆ ಶ್ರೀನಿವಾಸ ಗುತ್ತಿಗೆದಾರರು ತನ್ನ ಜೇಬಿನಿಂದ ಹಣವನ್ನು ತೆಗೆದು ಟೇಬಲ್ ಮೇಲೆ ಇಟ್ಟರು ಆದರೆ ನಾನು ಏತಕ್ಕೆ ಎಂದು ಕೇಳಿದೆ ಮತ್ತು ದುಡ್ಡನ್ನು ಎತ್ತಿ ಅವರ ಕಡೆಗೆ ಎಸೆದೆ ನಂತರ ಅವರು ಬಲವಂತವಾಗಿ ನನ್ನ ಕೈಗೆ ದುಡ್ಡು ಕೊಟ್ಟು ಜೇಬಿನಲ್ಲಿ ಇಡಲು ಹೇಳಿದರು ನಾನು ಜೇಬಿಗೆ ಹಾಕುವಷ್ಟರಲ್ಲಿ ಎಸಿಬಿ ಕಛೇರಿಯವರು ನಾವು ಎಂದು ಹೇಳಿದರು ಮತ್ತು ನನ್ನ ಎರಡು ಕೈಗಳನ್ನು ಬಲವಾಗಿ ಹಿಡಿದರು ಆದರೆ ಗುತ್ತಿಗೆದಾರರು ಇದನ್ನು ಪೂರ್ವ ಸಿದ್ದತೆ ನಡೆಸಿಕೊಂಡು ಬಂದಿದೆ ಏಕೆಂದರೆ, ಗುತ್ತಿಗೆದಾರರು ಪಾರ್ಟ್ ಬಿಲ್ಲು ಕೊಡುವುದಾಗಿ ಕೇಳಿದರು. ಆದರೆ, ನಾನು ಇದೇ ರೀತಿ ಗುತ್ತಿಗೆದಾರರು ನಾಲ್ಕು ಬಿಲ್ಲುಗಳನ್ನು ಕೊಟ್ಟಿದ್ದೇನೆ ಸುಮಾರು 67 ಲಕ್ಷ ಕೊಟ್ಟಿದರೂ, ಸಹ ಗುತ್ತಿಗೆದಾರರು ವಹಿಸಿಕೊಂಡಿರುವ ಕೆಲಸವನ್ನು ಪೂರ್ಣಗೊಳಿಸದೇ ಇರುವುದರಿಂದ ಗುತ್ತಿಗೆದಾರರಿಗೆ ಕರೆದು

ಪೂರ್ಣಗೊಳಿಸಲು ಸೂಚಿಸಿದೆ ಇದನ್ನೆ ಗುತ್ತಿಗೆದಾರರು ನನ್ನ ಮೇಲೆ ದ್ವೇಷ ಇಟ್ಟುಕೊಂಡು ಈ ರೀತಿ ಮಾಡಿರುತ್ತಾರೆ ಮತ್ತು ನಾನು ವಾಸು ಎ.ಇ ರವರಿಗೆ ವಿಚಾರಿಸಿದಾಗ ಸರ್ ರೈತರ ಮತ್ತು ರಾಜಕೀಯ ಒತ್ತಡ ಇರುವುದಾಗಿ ತಿಳಿಸಿದರು ಅದರಂತೆ ಶ್ರೀನಿವಾಸ ಗುತ್ತಿಗೆದಾರರ ಬಿಲ್ಲು ಕೊಡುವುದಾಗಿ ತಿಳಿಸಿದರು ಅದರಂತೆ ವಾಸುರವರು ಬಿಲ್ಲು ಬರದಿರುವುದಾಗಿ ತಿಳಿಸಿದರು ಆದರೆ ನಾನು ಗುತ್ತಿಗೆದಾರರಿಗೆ ಒಂದು ಬಿಲ್ಲು ಕೊಡುವುದಾಗಿ ತಿಳಿಸಿದೆ ನಂತರ ಕಾಮಗಾರಿಗಳು ಪೂರ್ಣಗೊಳಿಸಲು ತಿಳಿಸಿದೆ ಆದರೆ ಬಿಲ್ಲುಗಳು ನನ್ನ ಕೈಗೆ ಬರಲಿಲ್ಲವೆಂದು ಗುತ್ತಿಗೆದಾರರಿಗೆ ತಿಳಿಸಿದೆ ಮೇಲೆ ಹೇಳಿದ ಎಲ್ಲಾ ಅಂಶಗಳು ಸತ್ಯವಾಗಿದೆ ಈ ಆಪಾದನೆಯಿಂದ ಮುಕ್ತಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅಭಿವಂದನೆಗಳೊಂದಿಗೆ ಇಂತಿ ತಮ್ಮ ವಿಶ್ವಾಸಿ" ಎಂದು ಬರೆದುಕೊಟ್ಟ ಪ್ರತಿ ರಕ್ಷಣಾ ಹೇಳಿಕೆ ಬಗ್ಗೆ ತನಿಖಾಧಿಕಾರಿಗಳು ದೂರುದಾರರು ಮತ್ತು ನೆರಳು ಸಾಕ್ಷಿದಾರರನ್ನು ಕೇಳಿದಾಗ ಅವರುಗಳು ಎದುರುದಾರರು ಬರೆದುಕೊಟ್ಟಿರುವ ಪ್ರತಿ ರಕ್ಷಣಾ ಹೇಳಿಕೆಯು ಸುಳ್ಳೆಂದು ಎದುರುದಾರರು ದೂರುದಾರರಿಗೆ ಸಂಬಂಧಿಸಿದ ವಿದ್ಯುತ ಕಾಮಗಾರಿಯ 2ನೇ ಹಂತದ ಬಿಲ್ಲಗಳಿಗೆ ಶಿಫಾರಸು ಮಾಡಲು 1ನೇ ಎದುರುದಾರರು ದೂರುದಾರರಿಂದ ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು ದೂರುದಾರರಿಂದ ಲಂಚದ ಹಣವನ್ನು ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು 1ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

41. ಈ ಟ್ರ್ಯಾಪ್ ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಹಂತ ಹಂತವಾಗಿ ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿ ಮುಖಾಂತರ ಠಾಣೆಯ ಸೋನಿ ಕ್ಯಾಮೆರಾದಲ್ಲಿ ಪ್ರಮುಖ ಘಟನೆಗಳ ಫೋಟೋಗಳನ್ನು ತೆಗೆಸಿರುತ್ತಾರೆ.

42. ಮೇಲ್ಕಂಡ ಎಲ್ಲಾ ನಡವಳಿಕೆಗಳನ್ನು 1ನೇ ಎದುರುದಾರರ ಮತ್ತು ಪಂಚರ ಸಮಕ್ಷಮ ದಿ: 29-01-2020 ರಂದು ಸಂಜೆ 5.40 ರಿಂದ ದಿ:30-01-2020 ರ ಬೆಳಗಿನ ಜಾವ 12.30 ಗಂಟೆಯವರೆಗೆ ತಮ್ಮ ಸಿಬ್ಬಂದಿಯವರಿಗೆ ಉಖ್ತಲೇಖನ ನೀಡಿ ಟೈಪ್ ಮಾಡಿಸಿರುತ್ತಾರೆ.

43. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರುಗಳ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

44. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ಎದುರುದಾರರುಗಳ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಡಪಟ್ಟಿರುತ್ತದೆ.

45. ನಂತರ 1 ಮತ್ತು 2ನೇ ಎದುರುದಾರರಿಗೆ ದಿ: 01-07-2022 ರಂದು 1 ಮತ್ತು 2ನೇ ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. 1ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿ: 22-07-2022 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ.

46. 2ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿ: 22-07-2022 ರಂದು ಸಲ್ಲಿಸಿದ್ದು, ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ಮೇಲೆ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ತನ್ನ ಮೇಲಿನ ಆರೋಪವು ಸತ್ಯಕ್ಕೆ ದೂರವೆಂದು ನಿರ್ಧರಿಸಿ, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 1988 ರ ಕಲಂ 19 (1) (ಬಿ) ರನ್ವಯ ತನ್ನನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸುವ ಪ್ರಸ್ತಾವನೆಯನ್ನು ಕೈಬಿಟ್ಟಿರುತ್ತದೆ. ಮತ್ತು ಈ ಪ್ರಕರಣದ ತನಿಖಾಧಿಕಾರಿಯವರು ಈ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಚಿಕ್ಕಬಳ್ಳಾಪುರ ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ನಂ.13/2021 ದಿ:09-12-2021 ನ್ನು ಸಲ್ಲಿಸಿದ್ದು, ಆ ದೋಷಾರೋಪಣ ಪಟ್ಟಿಯಲ್ಲಿಯೂ ಸಹ ತನ್ನನ್ನು ಆರೋಪದಿಂದ ಕೈಬಿಟ್ಟು ಕೇವಲ ಆಪಾದಿತ-1 ರವರಾದ ಶ್ರೀ ಮಲ್ಲಿಕಾರ್ಜುನಯ್ಯ ರವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಹಾಗೂ ಕಾನೂನಿನ ಸಮಾನತೆ ಮತ್ತು ಸಹಜ ನ್ಯಾಯದ ದೃಷ್ಟಿಯಿಂದ ತನ್ನ ವಿರುದ್ಧ ಕೈಗೊಳ್ಳಲು ಉದ್ದೇಶಿಸಿರುವ ಶಿಸ್ತಿನ ಕ್ರಮವನ್ನು ಕೈಬಿಡುವಂತೆ ಕೋರಿ ಆಪಾದನೆಗಳನ್ನು ನಿರಾಕರಿಸುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ 1 ಮತ್ತು 2ನೇ ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

47. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ ಇವುಗಳನ್ನು ಪರಿಶೀಲಿಸಿದಾಗ 1ನೇ ಎದುರುದಾರರು ದಿ: 29-01-2021 ರಂದು ದೂರುದಾರರಿಂದ ರೂ. 50,000/- ಗಳನ್ನು ಪಡೆದಿರುತ್ತಾರೆ. ಮತ್ತು 2ನೇ ಎದುರುದಾರರು ತನಗೆ ರೂ.25,000/- ಗಳ ಲಂಚದ ಹಣ ನೀಡಿದರೆ ಕೆಲಸ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ. ಹಾಗಾಗಿ, ಇವರಿಬ್ಬರು ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ

ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

48. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ 1) ಶ್ರೀ.ಮಲ್ಲಿಕಾರ್ಜುನಯ್ಯ ತಂದೆ ಮೈಲಾರಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ, ಚಿಕ್ಕಬಳ್ಳಾಪುರ(ನಿವೃತ್ತ ದಿ: 31-07-2020) ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಕರ್ನಾಟಕ ನಾಗರೀಕ ಸೇವಾ ನಿಯಮ 214 (2) (ಬಿ) (i) ರ ಅಡಿಯಲ್ಲಿ ಶಿಸ್ತು ನಡವಳಿಕೆಯನ್ನು ಆರಂಭಿಸಿ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮ 214 (2) (ಬಿ) (iii) ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. 2) ಪಿ.ವಾಸು ಬಿನ್ ಪವನರಾಜ್ ಎಸ್. ಸಹಾಯಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ, ಚಿಕ್ಕಬಳ್ಳಾಪುರ (ನಿವೃತ್ತಿ ದಿ:30-9-2046) ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸು ಮಾಡಲಾಗಿದೆ.

49. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18/11/22

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.